ಸಂದರ್ಶನ: ಎಂ.ಎಸ್. ಆಶಾದೇವಿ

# ಭಕ್ತಿಯನ್ನೂ ಬಿಡದ ಅನುಶ್ರೇಣಿ ಹಾಗೂ ಯಜಮಾನಿಕೆ



## ವಿಮರ್ಶಕ ಕೆ.ಜಿ. ನಾಗರಾಜಪ್ಪ ಸಂದರ್ಶನ

ಕೆ.ಜಿ. ನಾಗರಾಜಪ್ಪನವರು ಕನ್ನಡದ ಬಹುಮುಖ್ಯ ಚಿಂತಕರು, ವಿಮರ್ಶಕರು ಹಾಗೂ ವಿದ್ವಾಂಸರು. 'ಶ್ರೇಣೀಕೃತ ವ್ಯವಸ್ಥೆಯೇ ಭಾರತದ ಎಲ್ಲ ಮುಖ್ಯ ಸವಾಲುಗಳ ಮೂಲ' ಎನ್ನುವ ನಿಲುವನ್ನು ತಮ್ಮ ನಿಡುಗಾಲದ ಬದುಕಿನುದ್ದಕ್ಕೂ ಎಲ್ಲ ದಿಕ್ಕುಗಳಿಂದ 'ಕಾಣಿಸುತ್ತ' ಬಂದವರು. ಈ ಸತ್ಯನಿಷ್ಠೆಗಾಗಿ ಲೋಕವನ್ನು ಎದುರು ಹಾಕಿಕೊಂಡವರು. ಇವರು ಕಾಣಿಸಿದ ಸತ್ಯದ ಪ್ರಖರತೆಯನ್ನು ಎದುರಿಸಲಾಗದೇ ಜನ ಕೋರ್ಟ್ ಮೆಟ್ಟಿಲು ಹತ್ತುತ್ತೇವೆ ಎಂದಾಗ, 'ಆಲ್ ರೈಟ್, ಅರ್ಧ ಬರವಣಿಗೆಯಲ್ಲಿ ಹೇಳಿದ್ದೇನೆ, ಇನ್ನರ್ಧ ಕೋರ್ಟ್‌ನಲ್ಲಿ ಹೇಳುತ್ತೇನೆ'